ಓ.ಎಸ್. ನಂ. 122/2015

ಡಿ.ಡಬ್ಲ್ಯು: 01 (ಬಸವರಾಜ)

ದಿನಾಂಕಃ 13.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ – ಶ್ರೀ BK ವಕೀಲರಿಂದ.

ದಾವೆಯ ಸರ್ವೆ ನಂಬರ್ 313/2 ಅದರ ವಿಸ್ತೀರ್ಣ 9.50 ಎಕರೆ ಆಗಿರುತ್ತದೆ. ದಾವೆಯನ್ನು ಪಾಪಮ್ಮ ರವರು ಬೋರಮ್ಮ ಗಂಡ ಬೋರಯ್ಯರವರ ವಿರುದ್ದ ಸಲ್ಲಿಸಿರುತ್ತಾರೆ. ಪಾಪಯ್ಯ ಮತ್ತು ಮುದಿಯಪ್ಪ ರವರು ಕ್ರಮವಾಗಿ ನನ್ನ ಸಣ್ಣಪ್ಪ ಮತ್ತು ದೊಡ್ಡಪ್ಪ ಆಗುತ್ತಾರೆ.

ದಾವೆಯ ಸರ್ವೆ ನಂಬರ್ 313/1 ಅದರ ವಿಸ್ತೀರ್ಣ 12.78 ಎಕರೆ ಜಮೀನನ್ನು ನನ್ನ ಅಜ್ಜಿ ಆದ ಬೋರಮ್ಮ ಗಂಡ ಬೋರಯ್ಯ ರವರ ಹೆಸರಿಗೆ ಪಟ್ಟ ನೀಡಿರುತ್ತಾರೆ ಎಂದರೆ ಅದನ್ನು ಮಾಡುತ್ತಿದ್ದೇವೆ ಅದಕ್ಕೆ ನಮಗೆ ಪಟ್ಟ ನೀಡಿರುತ್ತಾರೆ. ಅದನ್ನು 60 ವರ್ಷಗಳಿಂದ ನಮ್ಮ ಅಜ್ಜಿಯವರು ಉಳುಮೆ ಮಾಡುತ್ತಾ ಇದ್ದಾರೆ. ಅದರ ಬಗ್ಗೆ ಪಟ್ಟ ಹಾಜರು ಹಾಗೂ ಇತರಾ ದಾಖಲಾತಿಗಳನ್ನು ಹಾಜರುಪಡಿಸಿಲು ನನಗೆ ತೊಂದರೆ ಇಲ್ಲ.ಈಗ ಅದರ ಆರ್ ಟಿ ಸಿ ಯನ್ನು ನೋಡುತ್ತಿದ್ದು ಅದರಲ್ಲಿ ಚಿಕ್ಕಪ್ಪ ದೊಡಪ್ಪ ಜಂಟಿಯಾಗಿದೆ ಎಂದರೆ ಹೌದು. ಅದನ್ನು ಸಾಕ್ಷಿ ಒಪ್ಪಿದ ಕಾರಣ ನಿ ಪಿ 6 ಎಂದು ಗುರುತಿಸಲಾಯಿತು.

ಸರ್ಕಾರದವರು ವಾದಿಯ ತಾಯಿಗೆ ದಾವ ಸ್ವತ್ತಿಗೆ ನಿ ಪಿ 1 ರಂತೆ ಪಟ್ಟವನ್ನು 1959 ರಲ್ಲಿ ನೀಡಿರುತ್ತಾರೆ ಎಂದರೆ ಸುಳ್ಳು. 31.01.1998 ರಲ್ಲಿ ವಾದಿಯ ತಾಯಿ ಹಾಗೂ ಆಕೆಯ ಒಡಹುಟ್ಟಿದವರು ಹಕ್ಕು ಬಿಡುಗಡೆ ಪತ್ರವನ್ನು ದಾವ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ಅದರ ಆದರ ಮೇರೆಗೆ ವಾದಿಯ ಹೆಸರಿಗೆ ದಾವಾ ಸ್ವತ್ತು ವರ್ಗಾವಣೆ ಆಗಿದೆ ಎಂದರೆ ಹೌದು ಸಾಕ್ಷಿ ಮುಂದುವರೆದು ತಾಲೂಕು ಕಚೇರಿಯೊಂದಿಗೆ ಶಾಮೀಲ್ ಆಗಿ ಮಾಡಿಸಿಕೊಂಡಿರುತ್ತಾರೆ. ಹಕ್ಕು ಬದಲಾವಣೆ ಆದಗಿನಿಂದ ವಾದಿಯವರೇ ಇಂದಿನವರೆಗೂ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರೆ ಎಂದರೆ ನಾವೆ ಸ್ವಾಧೀನ ಇದ್ದೇವೆ.

ವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.